ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (247) 106
ಸದಸ್ಯರ ಹೆಸರು : ಶ್ರೀ ನಾಯ್ಕ ಜೆ.ಡಿ. (ಭಟ್ಕಳ)
ಉತ್ತರಿಸಬೇಕಾದ ಸಚಿವರು : (ಶ್ರೀ ಆನಂದ ವಸಂತ ಆಸ್ನೋಟಿಕರ್)
ಮೀನುಗಾರಿಕೆ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊನ್ನಾವರದ ಕಾಸರಗೋಡ ಬಂದರಿನಲ್ಲಿ ಹೂಳು ತುಂಬಿ ಮೀನುಗಾರಿಕೆಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೊನ್ನಾವರ ಮೀನಗಾರಿಕೆ ಬಂದರಿನ ಅಳಿವೆ ಬಾಯಿಯಲ್ಲಿ ಹೂಳು ತುಂಬಿ ಮೀನಗಾರಿಕೆಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ. ಕಳೆದ 3 ವರ್ಷಗಳಲ್ಲಿ ಎಷ್ಟು ಬೋಟು ಮತ್ತು ದೋಣಿ ಅಳಿವೆಯಲ್ಲಿ ಒಡೆದು ಹೋಗಿದೆ ಹಾಗೂ ಎಷ್ಟು ಜನ ಮೀನುಗಾರರು ತೀರಿಕೊಂಡಿದ್ದಾರೆ( ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ 5 ಯಾಂತ್ರಿಕೃತ ದೋಣಿ ಮತ್ತು ಒಂದು ಗಿಲ್‌ನೆಟ್ ದೋಣಿ ದುರಂತಕ್ಕೀಡಾಗಿವೆ ಹಾಗೂ ಒಬ್ಬ ಮೀನಗಾರ ಮೃತಪಟ್ಟಿರುತ್ತಾರೆ. |
| ಇ) | ಈ ಮೀನುಗಾರಿಕಾ ಬಂದರಿನ ಹೂಳು ಎತ್ತು ಬಂಡಿ ಹಾಗೂ ಬ್ರೇಕ್ ವಾಟರ್ ಕಾಮಗಾರಿ ಯಾವಾಗ ಪ್ರಾರಂಭವಾಗುತ್ತದೆ. | ಬಂದರಿನ ಅಳಿವೆ ಬಾಯಿಯಲ್ಲಿ ಹೂಳೆತ್ತುವ ಬಗ್ಗೆ ಅಂದಾಜುಪಟ್ಟಿ ತಯಾರಿಸಲಾಗಿದ್ದು. ರೂ. 50.00 ಲಕ್ಷಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಈ ಬಗ್ಗೆ ಟೆಂಡರು ಕರೆಯಲಾಗಿದ್ದು. ಕೆಲಸದ ಆದೇಶ ನೀಡಲಾಗಿದೆ. ಮಳೆಗಾಲದ ನಂತರ ಕಾಮಗಾರಿ ಪ್ರಾರಂಭ ಮಾಡಲಾಗುವುದು.<br>ಬ್ರೇಕ್ ವಾಟರ್ ನಿರ್ಮಾಣದ ಬಗ್ಗೆ ಪೂನಾದ ಕೇಂದ್ರ ಜಲ ಮತ್ತು ವಿದ್ಯುತ್ ಸಂಶೋಧನಾ ಕೇಂದ್ರ ಅವರಿಂದ ಅಂತಿಮ ಭೌತಿಕ ವಿನ್ಯಾಸ ಪಡೆದು ವಿವರವಾದ ಅಂದಾಜು ತಯಾರಿಸಿ ಅಗತ್ಯ ಅನುದಾನ ಮತ್ತು ಅನುಮತಿ ಪಡೆದು ಟೆಂಡರ್ ಪ್ರಕ್ರಿಯೆಯ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು. |
| ಈ) | ಸದರಿ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು ? (ಕಾಮಗಾರಿ ವಿವರ ನೀಡುವುದು) | ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಬೇಕಾಗುತ್ತದೆ. |